# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್- ಸಂಖ್ಯೆ 160ರಲ್ಲಿ ದಿನಾಂಕ: 06.02.2021 ರಂದು, ನಡೆದ ವಾರ್ಡ್‌ಕಮಿಟಿ ಸಭೆಯ ಸಭಾ ನಡವಳಿಗಳು

ದಿನಾಂಕ:06.02.2021 ರಂದು ವಾರ್ಡ್ ಸಂಖ್ಯೆ 160ರ ಫೆಬ್ರವರಿ ಮಾಹೆಯ ಮೊದಲನೇ ಶನಿವಾರದ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

## ❖ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳು

- ಸಪ್ತಗಿರಿ ಬಡಾವಣೆಯ ನಿವಾಸಿಯಾದ ಶ್ರೀಮತಿ ಪ್ರತಿಮಾರಾವ್ ರವರು ಸಪ್ತಗಿರಿ ಬಡಾವಣೆಯ ರಸ್ತೆ, ಚರಂಡಿ, ಕಸದ ನಿರ್ವಹಣೆಯ ಸಮಸ್ಯೆಗಳ ಕುರಿತು ಒಂದು ದಿನಾಂಕ ನಿಗಧಿಪಡಿಸಿ ಸ್ಥಳ ಪರಿವೀಕ್ಷಣೆ ಮಾಡಿ ಪರಿಹಾರ ಕಲ್ಪಿಸಲು ನೋಡಲ್ ಅಧಿಕಾರಿಗಳಿಗೆ ಕೋರಿದರು.
- ವಾರ್ಡ್ ಸಮಿತಿ ಸದಸ್ಯರಾದ ಶ್ರೀ ಎಸ್.ಆರ್.ಪಾಂಡುರಂಗ ರವರು ಕಸದ ನಿರ್ವಹಣೆಯ ಬಗ್ಗೆ ತಿಳಿಸುತ್ತಾ, ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು ಕಸದ ಗಾಡಿಗಳ ಸಂಖ್ಯೆ ಹೆಚ್ಚಾಗಿದ್ದು ಸ್ವೀಪರ್ಸ್‌ಗಳ ಕೊರತೆ ಇರುವುದರಿಂದ ಕಸದ ನಿರ್ವಹಣೆಯಲ್ಲಿ ವ್ಯತ್ಯಾಸವಾಗುತ್ತಿದ್ದು, ಈ ಸಂಬಂಧ ಘನ ತ್ಯಾಜ್ಯ ನಿರ್ವಹಣೆ ವಿಭಾಗಕ್ಕೆ 10.02.2021 ರಂದು ಪ್ರತ್ಯೇಕವಾಗಿ ಸಭೆ ನಿಗಧಿಪಡಿಸಿ ಚರ್ಚಿಸುವುದಾಗಿ ತಿಳಿಸಿದರು.
- ಮಾರ್ಷಲ್ ಗಳು ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕುತ್ತಿರುವವರಿಗೆ ದಂಡ ವಿಧಿಸುತ್ತಿಲ್ಲವೆಂದು ಹಾಗೂ ರಸ್ತೆ ಬದಿ ಬೀದಿ ಬದಿ ವ್ಯಾಪಾರಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು, ಸ್ವಚ್ಛತೆ ಕಾಪಾಡುತ್ತಿಲ್ಲವೆಂದು ಎಸ್.ಆರ್. ಪಾಂಡುರಂಗ ರವರು ದೂರು ನೀಡಿದರು.
- ಮರಗಳ ಎಲೆ ವಿಲೇವಾರಿ ಮಾಡಲು ಅಗತ್ಯ ವ್ಯವಸ್ಥೆ ಕಲ್ಪಿಸುವಂತೆ ಕೋರಲಾಯಿತು.

## ❖ ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಸಿಲ್ಟ್ & ಟ್ರಾಕ್ಟರ್ ಕಾಮಗಾರಿ ಕಾರ್ಯಾದೇಶ ಯಾವಾಗ ದೊರೆಯುತ್ತದೆಂದು ನೋಡಲ್ ಅಧಿಕಾರಿಗಳು ಸಹಾಯಕ ಅಭಿಯಂತರರನ್ನು ವಿಚಾರಿಸಲಾಗಿ, ಉತ್ತರಿಸಿದ ಸಹಾಯಕ ಅಭಿಯಂತರರು ಈಗಾಗಲೇ ಕಾರ್ಯಾದೇಶ ದೊರೆತಿದ್ದು ಸಿಲ್ಟ್ ತೆರವುಗೊಳಿಸಲು ಕ್ರಮ ವಹಿಸುತ್ತಿರುವುದಾಗಿ ತಿಳಿಸಿದರು.
- ವಾರ್ಡ್ ಸಮಿತಿ ಸದಸ್ಯರಾದ ಶ್ರೀ ಎಸ್.ಆರ್.ಪಾಂಡುರಂಗ ರವರು ಸುಭಾಷ್ ಭವನ ಗ್ರೌಂಡ್ ನಲ್ಲಿ ಹಾಕಿರುವ ಮಣ್ಣನ್ನು ತೆರವುಗೊಳಿಸರುವುದಿಲ್ಲವೆಂದು ದೂರು ನೀಡಿ ಕೊನೆಯ ಪಕ್ಷ ಮಣ್ಣನ್ನು ಲೆವೆಲ್ ಮಾಡಿಸಿ ಕೊಡಲು ಕೋರಿದರು.

- ಕಾರ್ಪೊರೇಶನ್ ಬ್ಯಾಂಕ್ ರಸ್ತೆಯಲ್ಲಿ ಪಾದಾಚಾರಿ ಮಾರ್ಗ ಒತ್ತುವರಿ ಮಾಡಿಕೊಂಡಿದ್ದು ತೆರವುಗೊಳಿಸಲು ಕೋರಲಾಯಿತು.
- ಗೋಪಾಲನ್ ಮಾಲ್ ಬಳಿಯ ಬೃಹತ್ ನೀರುಗಾಲುವೆ ಮೇಲೆ ನಿರ್ಮಿಸಿರುವ ಬ್ರಿಡ್ಜ್ ಮೇಲೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಫುಟ್ ಪಾತ್ ಒತ್ತುವರಿ ಮಾಡಿಕೊಂಡು ಪೈಪ್ ಅಳವಡಿಸಿರುವುದಾಗಿ ದೂರು ನೀಡಿದ ಮೇರೆಗೆ ಉತ್ತರಿಸಿದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ಹಿಂದೆಯೇ ಪೈಪ್ ಅಳವಡಿಸಲಾಗಿದ್ದು, ಬ್ರಿಡ್ಜ್ ಅಗಲ ಹೆಚ್ಚಿಸಬೇಕಿರುತ್ತದೆಂದು ತಿಳಿ ದರು.
- ಸಾಯಿ ಲೋಟಸ್ ಬಡಾವಣೆಯ ನಿವಾಸಿಗಳು ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಪಡಿಸಲು ಕೋರಿದರು ಇದಕ್ಕೆ ಪ್ರತಿಕ್ರಿಯಿಸಿದ ಸಹಾಯಕ ಅಭಿಯಂತರರು ಸದರಿ ರಸ್ತೆಗಳನ್ನು ಅಭಿವೃದ್ದಿಪಡಿಸಲು ಅನುಮೋದನೆ ದೊರೆತಿದ್ದು ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದೆಂದು ತಿಳಿಸಿದರು.
- ಕಾರ್ಪೊರೇಶನ್ ಬ್ಯಾಂಕ್ ರಸ್ತೆಯಲ್ಲಿ ವೃದ್ಧಾಶ್ರಮ ಕಟ್ಟಡ ನಿರ್ಮಿಸುತ್ತಿದ್ದು, ಸೆಟ್ ಬ್ಯಾಕ್ ಬಿಡದೆ ಪಕ್ಕದ ಕಟ್ಟಡದ ಕಾಂಪೌಂಡ್ ಗೆ ಸೇರಿಸಿ ಕಟ್ಟಡ ನಿರ್ಮಿಸುತ್ತಿದ್ದು ಸೂಕ್ತ ಕ್ರಮ ವಹಿಸುವಂತೆ ಕೋರಿದರು.
- ಮರದ ಸುತ್ತ ಕಾಂಕ್ರೀಟ್ ಹಾಕಿ ಫುಟುಪಾತ್ ನಿರ್ಮಿಸುತ್ತಿದ್ದು ಸೂಕ್ತ ಕ್ರಮ ವಹಿಸುವಂತೆ ಕೋರಿದರು.

### ❖ <u>ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು</u>

- ನಿಮಿಶಾಂಭ ದೇವಸ್ಥಾನದಿಂದ ಜಯಣ್ಣ ಸರ್ಕಲ್ ವರೆಗೆ ಒಳ ಚರಂಡಿ ಕಾಮಗಾರಿ ಕೈಗೊಳ್ಳಬೇಕಾಗಿದ್ದು, ರಸ್ತೆ ಅಗೆಯಲು ಅನುಮತಿ ದೊರಕಿಸಿ ಕೊಡುವಂತೆ ನೋಡಲ್ ಅಧಿಕಾರಿಗಳಿಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಕೋರಿದರು.

ಸಹಿ/-

ಸದಸ್ಯ ಕಾರ್ಯದರ್ಶಿಗಳು ವಾರ್ಡ್ ಸಮಿತಿ

ವಾರ್ಡ್ ಸಂಖ್ಯೆ-160.

<u>ಪ್ರತಿಯನ್ನು:-</u>

1.ನೋಡಲ್ ಅಧಿಕಾರಿಗಳು, ವಾರ್ಡ್-160.

2.ಜಂಟಿ ಆಯುಕ್ತರು, ರಾರಾನಗರ ವಲಯ.

3.ಮುಖ್ಯ ಅಭಿಯಂತರರು, ರಾರಾನಗರ ವಲಯ.

4.ಕಾರ್ಯಪಾಲಕ ಅಭಿಯಂತರರು, ರಾರಾನಗರ ವಿಭಾಗ.

5.ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

6.ವಾರ್ಡ್ ಸಮಿತಿ ಸದಸ್ಯರುಗಳಿಗೆ.

7.ಕಛೇರಿ ಪ್ರತಿ.